

# ಸಿನಿಮಾ

## ಬುದ್ಧಿ-ಭಾವದ ಸಂಗಮ

'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಸಿನಿಮಾದ ದೃಶ್ಯ

**ಜಗತ್ತಿನ ಸಿನಿಮಾಲೋಕದಲ್ಲಿ ಕನ್ನಡದ ಡಿಂಡಿಮ ಮೊಳಗಿಸಿದ, ಕನ್ನಡದ ಪ್ರಜ್ಞೆಯನ್ನು ಸಿನಿಮಾ ಮಾಧ್ಯಮದ ಮೂಲಕ ವಿಸ್ತರಿಸಿದ ಬಹುಮುಖ್ಯ ನಿರ್ದೇಶಕ ಗಿರೀಶ ಕಾಸರವಳ್ಳಿ. ಹಲವು ರಾಷ್ಟ್ರಪ್ರಶಸ್ತಿಗಳ ಅಗ್ಗಳಿಕೆಯ ಹೊರತಾಗಿಯೂ, ಅವರ ಸಿನಿಮಾಗಳು ಸಹೃದಯನ ಜೊತೆ ನಡೆಸುವ ಗಾಢ ಸಂವಾದದ ಕಾರಣದಿಂದ ಬಹುಕಾಲ ಉಳಿಯಬಲ್ಲಂಥವು. 'ಕೂರ್ಮಾವತಾರ' ಅವರು ನಿರ್ದೇಶಿಸಿದ ಹಿಂದಿನ ಸಿನಿಮಾ. ಸುಮಾರು ಒಂಬತ್ತು ವರ್ಷಗಳ ನಂತರ ಅವರು ಇನ್ನೊಂದು ಸಿನಿಮಾ ಜೊತೆ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ. ಜಯಂತ ಕಾಯ್ಕಿಣಿ ಅವರ 'ಹಾಲಿನ ಮೀಸೆ' ಆಧರಿಸಿದ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' ಸಿನಿಮಾ ಈಗಾಗಲೇ ಪೂರ್ಣಗೊಂಡಿದೆ. ಈ ನೆಪದಲ್ಲಿ ಸಿನಿಮಾ ಮಾಧ್ಯಮದ ಕುರಿತು ಕಾಸವರಳ್ಳಿ ಅವರ ಜೊತೆಗೆ ನಡೆಸಿದ ಮಾತುಕತೆ ಇಲ್ಲಿದೆ.**

■ **ಪದ್ಮನಾಭ ಭಟ್**

◆ **ಸುಮಾರು ಒಂಬತ್ತು ವರ್ಷಗಳ ನಂತರ ಸಿನಿಮಾ ನಿರ್ದೇಶನ ಮಾಡಿದ್ದೀರಿ. ನಿಮ್ಮ ನಿರ್ದೇಶನದ ಪಯಣದಲ್ಲಿ ಇದು ದೊಡ್ಡ ಬಿಡುವು. ಇದನ್ನು ನೀವೇ ಇಷ್ಟಪಟ್ಟು ಮಾಡಿಕೊಂಡಿದ್ದೇ?**

'ಕೂರ್ಮಾವತಾರ' ನನ್ನ ನಿರ್ದೇಶನದ ಹಿಂದಿನ ಸಿನಿಮಾ. ಆ ಸಿನಿಮಾ ಮಾಡುತ್ತಿದ್ದ ಹಾಗೆಯೇ ನನಗೆ ಯು.ಆರ್. ಅನಂತಮೂರ್ತಿ ಮತ್ತು ಅಡೂರು ಗೋಪಾಲಕೃಷ್ಣ ಅವರ ಕುರಿತು ಸಾಕ್ಷ್ಯಚಿತ್ರ ಮಾಡುವ ಯೋಜನೆ ಬಂತು. ಅವುಗಳನ್ನು ಮಾಡಿ ಮುಗಿಸುವಷ್ಟರಲ್ಲಿ ಮೂರು ವರ್ಷಗಳು ಕಳೆದುಹೋಗಿದ್ದವು. ನಂತರ ವಿಧಾನಸೌಧದದ ಕುರಿತು ಸಾಕ್ಷ್ಯಚಿತ್ರ ಮಾಡಲು ಶುರು ಮಾಡಿದೆ. ಹೀಗೆ ಸಾಕ್ಷ್ಯಚಿತ್ರ ಮತ್ತು ಕಿರುಚಿತ್ರಗಳನ್ನು ಮಾಡುತ್ತ ಕಾಲಕಳೆದೆ. ಈ ನಡುವೆ ಕನ್ನಡ ಪರ್ಯಾಯ ಸಿನಿಮಾ ಜಗತ್ತಿನ ವಾತಾವರಣವೂ ಅಷ್ಟು ಪೂರಕವಾಗಿರಲಿಲ್ಲ. ಹಾಗಾಗಿ ಸುಮ್ಮನಿದ್ದೆ. ಕೆಲವು ವೈಯಕ್ತಿಕ ಸಮಸ್ಯೆಗಳೂ ಇದ್ದವು. ಬಸಂತ್‌ಕುಮಾರ್ ಪಾಟೀಲರು 'ಸಿನಿಮಾ ಮಾಡೋಣ' ಎನ್ನುತ್ತಲೇ ಇದ್ದರು. ನಾನೇ ಮುಂದೆ ಹಾಕುತ್ತ ಬಂದೆ.

◆ **ಇಷ್ಟು ವರ್ಷದ ನಂತರ ಮತ್ತೊಮ್ಮೆ ನಿಮ್ಮನ್ನು ನೀವು ಸಿನಿಮಾ ನಿರ್ದೇಶನಕ್ಕೆ ಕೊಟ್ಟುಕೊಂಡ ಅನುಭವ ಹೇಗಿತ್ತು? ಈ ಅಂತರದಲ್ಲಿ ಏನಾದರೂ ಬದಲಾವಣೆ ಕಾಣಿಸಿವೆಯಾ?**

ಈಗ ಸಿನಿಮಾದ ಎಲಿಮೆಂಟ್ಸ್ ಬಗ್ಗೆ ಜಗತ್ತಿನಾದ್ಯಂತ ಬೇರೆ ಥರದ ಚಿಂತನೆಯೇ ಶುರುವಾಗಿದೆಯಲ್ಲ. ಸಿನಿಮಾದ ಈಡಿಯಮ್ಸ್, ಫಿಲಾಸಫಿ, ಏಸ್ತಟಿಕ್ಸ್ ಎಲ್ಲವೂ ತುಂಬ ಬದಲಾಗಿವೆ. ಭಾರತದ ಸಿನಿಮಾದಲ್ಲಿಯೂ ಈ ಥರ ಬಹಳ ಬದಲಾವಣೆಗಳು ನಡೆದಿವೆ. ನಾನದಕ್ಕೆ ಕೊಟ್ಟುಕೊಳ್ಳಬೇಕಾ, ಕೊಟ್ಟುಕೊಳ್ಳಬಾರದಾ ಎಂಬೆಲ್ಲ ಮಂಥನ ನನ್ನೊಳಗೆ ನಡೆಯುತ್ತಲೇ ಇತ್ತು. ಅಲ್ಲೇನೋ ಆಯ್ತು ಎಂದು ನಮ್ಮೊಳಗೂ ಬದಲಾವಣೆ ಆಗುವುದಕ್ಕೆ ಸಾಧ್ಯವಿಲ್ಲವಲ್ಲ. ಅದು ಒಳಗಿನಿಂದ ಸಾವಯವವಾಗಿ ಬರಬೇಕು.

ಹಾಗೆಯೇ ಹೊರಗಿನ ಪ್ರಪಂಚದಲ್ಲಿಯೂ ಬಹಳಷ್ಟು ಬದಲಾವಣೆ ಆಗಿವೆ. ಸಮಾಜೋ ಆರ್ಥಿಕ ಬದಲಾವಣೆಗಳು ಆಗಿವೆ. ಅದು ಸರಿಯೇ? ತಪ್ಪೇ? ಅದನ್ನು ಅರ್ಥಮಾಡಿಕೊಳ್ಳಲು ಇರುವ ದಾರಿಗಳು ಯಾವುವು? ಹೀಗೆ ಹೊಸ ಬಗೆಯ ಮಂಥನವನ್ನು ನನ್ನೊಳಗೆ ಹುಟ್ಟಿಸುತ್ತಿದ್ದವು.

◆ **ಜಯಂತ ಕಾಯ್ಕಿಣಿ 'ಹಾಲಿನ ಮೀಸೆ' ಕಾದಂಬರಿ ಬರೆದಿದ್ದು 1994ರಲ್ಲಿ. ನೀವು ಈ ಕಥೆಯನ್ನು ಆಗಲೇ ಓದಿರುತ್ತೀರಿ. ಇಷ್ಟು**